**MVC No.**16/2023
**PW**-1

**ದಿನಾಂಕಃ 19-01-2026.**
**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟಿ ಸವಾಲು: ಶ್ರೀ SND ಮಾನ್ಯ ವಕೀಲರಿಂದ 1 ನೇ ಎದುರುದಾರರ ಪರವಾಗಿಃ**

ನನಗೆ ನನ್ನ ಜನ್ಮ ದಿನಾಂಕ ನೆನಪಿರುವುದಿಲ್ಲ. ನಾನು ನನ್ನ ಅರ್ಜಿಯಲ್ಲಿ ನಾನು ಭಾಲ್ಕಿಯಲ್ಲಿ ವಾಸ ಮಾಡುತ್ತೇನೆ ಎಂದು ನಮೂದು ಮಾಡಿದ್ದು ಆ ವಿಳಾಸಕ್ಕಾದಂತೆ ನಾನು ಆಧಾರ ಕಾರ್ಡನ್ನು ಹೊಂದಿರುತ್ತೇನೆ. ಸದರಿ ಆಧಾರ ಕಾರ್ಡ ನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಅಪಘಾತವು ದಿಃ 19-06-2022 ರಂದು ಆಗಿರುತ್ತದೆ. ಸದರಿ ದಿನದಂದು ನಾನು ನನ್ನ ಮನೆಯಿಂದ ದೇವಸ್ತಾನಕ್ಕೆ ಹೋಗುತ್ತಿದ್ದೆ. ನನಗೆ ಅಪಘಾತಪಡಿಸಿದ ಸದರಿ ವಾಹನ ಸಂಖ್ಯೆ ಗೊತ್ತಿರುವುದಿಲ್ಲ.

2. ಸದರಿ ವಾಹನವು ಯಾದಗಿರಿ ಕಡೆಯಿಂದ ಬಂದಿರುತ್ತದೆ. ಸದರಿ ದಿನದಂದು ಸದರಿ ಅಪಘಾತಪಡಿಸಿದ ವಾಹನವನ್ನು ಶ್ರೀ ರಾಘವೇಂದ್ರ ತಂದೆ ನಿಂಗಪ್ಪ ಆಂದೇಲಿ ಇವರು ಓಡಿಸುತ್ತಿದ್ದರು. ನಾನು ಸದರಿ ದಿನದಂದು ನಾನು ರಸ್ತೆಯನ್ನು ಬಿಟ್ಟು ಕಚ್ಚಾ ರಸ್ತೆಯ ಮೇಲೆ ಹೋಗುತ್ತಿದ್ದೆ ಆದರೆ ಎಷ್ಟು ಪೀಟ್ ಎಂದು ಹೇಳಲು ಬರುವುದಿಲ್ಲ.

3. ಸದರಿ ಅಪಘಾತದಲ್ಲಿ ನನ್ನ ಮೂಗಿಗೆ ಪೆಟ್ಟಾಗಿದ್ದು ಶಸ್ತ ಚಿಕಿತ್ಸೆಗೆ ಒಳಗೊಂಡಿರುತ್ತೇನೆ. ಸದರಿ ಅಪಘಾತವಾದ ನಂತರ ಸ್ತಳದಲ್ಲಿ Petrol bunk ನವರು ಹಾಜರಿದ್ದು ನನಗೆ ಅವರ ಹೆಸರು ಗೊತ್ತಿರುವುದಿಲ್ಲ. ನಾನು ಅಪಘಾತವಾದ ನಂತರ ಚಿಕಿತ್ಸೆಗೆ ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ಅಪಘಾತವಾದ ದಿನದಂದೇ ಪೋಲಿಸ್ ಠಾಣೆಗೆ ದೂರನ್ನು ಸಲ್ಲಿಸಲು ಹೋಗಿದ್ದು ಆದರೆ ಅದನ್ನು ಪೊಲೀಸರು ತೆಗೆದುಕೊಳ್ಳದ ಕಾರಣ 1 ವರೆ ತಿಂಗಳ ನಂತರ ದೂರನ್ನು SP Yadgir ಇವರಿಗೆ ಸಲ್ಲಿಸಿರುತ್ತೇನೆ. SP Yadgir ಇವರಿಗೆ ಕೊಟ್ಟಿರುವ ದೂರಿನ

ಪ್ರತಿಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಅಪಘಾತವಾದ ದಿನದದಂದೇ ಪೊಲೀಸ್ ಠಾಣೆಗೆ ದೂರನ್ನು ಕೊಡಲು ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ SP Yadgir ಇವರಿಗೆ ಸದರಿ ದೂರನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.**